ದಿನಾಂಕ 12-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ-**

1. 1ನೇ ಆರೋಪಿ ಸಿಂಧನೂರಿನ ಜನತಾ ಬಜಾರ್ ಹತ್ತಿರ ಗ್ಯಾರೇಜ್ ನಡೆಸುತ್ತಿದ್ದಾರೆ ಎಂದರೆ ಸರಿ.ಸಾಕ್ಷಿಯು ಮುಂದುವರೆದು ಸುಮಾರು 3 ವರ್ಷಗಳ ಹಿಂದೆ ಮಸ್ಕಿಯಲ್ಲಿ ನಾವು ಅವರಿಗೆ ಗ್ಯಾರೇಜ್ ಇಟ್ಟುಕೊಟ್ಟಿದ್ದೆವು, ಅವರು ಅಲ್ಲಿಯೇ ಗ್ಯಾರೇಜ್ ನಡೆಸುತ್ತಿದ್ದಾರೆ ಎನ್ನುತ್ತಾರೆ ಮದುವೆಗೂ ಮುಂಚೆ ಆರೋಪಿತರು ಮೆಕ್ಯಾನಿಕ್ ಆಗಿ ಗ್ಯಾರೇಜ್ ನಡೆಸುತ್ತಿದ್ದರು ಎಂದರೆ ಸರಿ. ಆದ್ದರಿಂದ ನಿಮ್ಮ ತಂಗಿಯನ್ನು ಆತನಿಗೆ ಕೊಟ್ಟು ವಿವಾಹ ಮಾಡಿದ್ದರು ಎಂದರೆ ಸರಿ. ಆರೋಪಿತರು ಮೊದಲಿನಿಂದಲೂ ನಮ್ಮ ಸಂಬಂಧಿಕರಲ್ಲ. ನಿಮ್ಮ ತಂಗಿಯ ಮದುವೆ ಆದ ನಂತರ ನಿಮ್ಮ ಮದುವೆ ಆಗಿತ್ತು ಎಂದರೆ ಸರಿ. ನಿಮ್ಮ ಮದುವೆಗೆ ಆರೋಪಿತರು ತಕರಾರು ಮಾಡಿದ್ದರು ಎಂದರೆ ಸರಿಯಲ್ಲ. ನಿಮ್ಮನ್ನು ನಿಮ್ಮ ಗಂಡನಿಗೆ ಮದುವೆ ಮಾಡಿಕೊಡಲು ಆರೋಪಿತರಿಗೆ ಇಷ್ಟವಿರಲಿಲ್ಲ ಎಂದರೆ ಸರಿಯಲ್ಲ.

2. ರೂ.3 ಲಕ್ಷವನ್ನು ನೀವು ಬೇರೆಯವರಿಂದ ಸಾಲ ಪಡೆದು ಆರೋಪಿತರಿಗೆ ಕೊಟ್ಟ ಬಗ್ಗೆ ದಾಖಲೆಯನ್ನು ಮಾಡಿಕೊಂಡಿಲ್ಲ. ನನ್ನ ಮುಖ್ಯವಿಚಾರಣೆಯ ಮೊದಲನೇ ಪ್ಯಾರಾದ ಅಂಶಗಳನ್ನು ನಾನು ಪೋಲೀಸರಿಗೆ ಹೇಳಿ ಬರೆಸಿದ್ದೆ.

3. ಗಲಾಟೆಯಾದ ದಿನ ರಾತ್ರಿ ಕತ್ತೆಲೆಯಾಗಿತ್ತು ಎಂದರೆ ಸರಿ. ಕತ್ತಲೆಯಲ್ಲಿ ಒಬ್ಬರ ಮುಖ ಒಬ್ಬರಿಗೆ ಕಾಣುವುದಿಲ್ಲ ಎಂದರೆ ಸರಿ. ನಿಮ್ಮ ಮನೆಯ ಪಕ್ಕದಲ್ಲಿ ಅಥವಾ ಹಿಂದೆ ದಾದಾಪೀರ್ ರವರ ಮನೆ ಇದೆ ಎಂದರೆ ಸರಿಯಲ್ಲ. ನಿಮ್ಮ ಮನೆಯ ಮುಂದೆ ತಾಜುದ್ದೀನ್ ರವರ ಮನೆ ಇದೆ ಎಂದರೆ ಸರಿ.

4. ಶಾಮೀದಾ ಬೇಗಂ ರವರು ನಮ್ಮ ಮನೆಯ ಹಿಂದಿನ ಮನೆಯವರು. ಆ ದಿನ ನನ್ನ ಅಣ್ಣ ಮನೆಯ ಒಳಗೆ ಮಲಗಿದ್ದ. ಚಾಸಾ-5 ರವರು ಅರ್ಧ ಗಂಟೆಯ ನಂತರ ಬಂದಿದ್ದರು.

5. ನನ್ನ ಬಟ್ಟೆ ಹಿಡಿದು ಎಳೆದಾಡಿದ ಬಗ್ಗೆ ಪೋಲೀಸರ ಮುಂದೆ ಹೇಳಿದ್ದೆ, ಕೈ ಹಿಡಿದು ಎಳೆದಾಡಿದ ಬಗ್ಗೆ ನಾನು ಪೋಲೀಸರಿಗೆ ಹೇಳಿಲ್ಲ. ನಾವು ಆಸ್ಪತ್ರೆಯಲ್ಲಿ 3 ದಿನ ಇದ್ದೆವು. ನಾನು ಆಸ್ಪತ್ರೆಯಲ್ಲಿ 3 ದಿನ ನನ್ನ ತಮ್ಮನೊಂದಿಗೆ ಇದ್ದೆ. ನನಗೆ ಗಾಯಗಳಾಗಿರಲಿಲ್ಲ, ನನ್ನ ಬಟ್ಟೆ ಹರಿದಿತ್ತು. ಹರಿದ ಬಟ್ಟೆಯನ್ನು ಪೋಲೀಸರಿಗೆ ತೋರಿಸಿದ್ದೆ.

6. ದೂರು ಕೊಡುವ ಮುಂಚೆ ನಿಮ್ಮ & ಆರೋಪಿತರ ನಡುವೆ ಸಂಬಂಧ ಸರಿ ಇರಲಿಲ್ಲ ಎಂದರೆ ಸರಿಯಲ್ಲ. ನಿಮ್ಮ ಮದುವೆಯ ವಿಚಾರವಾಗಿ ನಿಮ್ಮ & ಆರೋಪಿತರ ನಡುವೆ ಜಗಳ ಆಗಿತ್ತು

ಎಂದರೆ ಸರಿಯಲ್ಲ. ಸದರಿ ವಿಷಯ ನನ್ನ ತಂಗಿಗೆ ಗೊತ್ತಿದೆ. ನೀವು ರೂ.3 ಲಕ್ಷವನ್ನು ಆರೋಪಿತರಿಗೆ ಕೊಟ್ಟಿಲ್ಲ, ನಿಮಗೆ ಆ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ.

7. ನಾನು ಹಾಸ್ಪೆಲ್‌ನಲ್ಲಿ ಕೆಲಸ ಮಾಡುತ್ತೇನೆ. ಸದರಿ ಉದ್ಯೋಗದಿಂದ ಬರುವ ಆದಾಯದಿಂದ ಜೀವನ ನಡೆಸುತ್ತೇನೆ ಎಂದರೆ ಸರಿ. ನನ್ನ ಸಂಬಳ ರೂ.18,000/-.

8. ಆರೋಪಿತರು ಬಂದು ನಿಮ್ಮ ತಮ್ಮನಿಗೆ ಹೊಡೆದಿಲ್ಲ ಎಂದರೆ ಸರಿಯಲ್ಲ. ನಿಮಗೆ & ನಿಮ್ಮ ತಮ್ಮನಿಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ನಿಮ್ಮ ತಮ್ಮನ ಕುತ್ತಿಗೆ ಹೊಡೆದು, ಕಾಲರ್ ಎಳೆದಿಲ್ಲ ಎಂದರೆ ಸರಿಯಲ್ಲ. ನಿಮ್ಮ ಬಟ್ಟೆಯನ್ನು ಹಿಡಿದು ಎಳೆದಾಡಿಲ್ಲ ಎಂದರೆ ಸರಿಯಲ್ಲ. ನಿಮಗೆ ಯಾವುದೇ ಜೀವದ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ನಿಮ್ಮ & ಆರೋಪಿತರ ನಡುವಿನ ದ್ವೇಷದಿಂದ ಈ ರೀತಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ-**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ಸಿಂಧನೂರು.**